<u>ಸಿಸಿ ಸಂಖ್ಯೆ: **- 141/2016**</u>

ಸಿ.ಡಬ್ಲ್ಯೂ **:-1-** ಬಸಮ್ಮ

ದಿನಾಂಕ: **06-06-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು **:-** ಆರೋಪಿ ಪರ ವಕೀಲರಾದ ಶ್ರೀ.ಬಿ ಕೆ ಎನ್ ವಕೀಲರಿಂದ **:-**</u>

1. ಈ ಪ್ರಕರಣದ ಫಿರ್ಯಾದಿಯಲ್ಲಿ ಯಾವ ಸಂಗತಿಗಳನ್ನು ನಮೂದಿಸಲಾಗಿದೆ ಎಂಬ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇಲ್ಲ ಎಂದರೆ ಸರಿ. 1 ನೇ ಆರೋಪಿಯು ನನ್ನನ್ನು ವಿವಾಹವಾಗಿ ಆನಂತರ ವಿವಾಹವಾಗಿಲ್ಲವೆಂದು ಮೋಸ ಮಾಡಿದ ಬಗ್ಗೆ ಆತನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ. 1 ಮತ್ತು 2 ನೇ ಆರೋಪಿತರು ಮದುವೆಯಾಗಿದ್ದಾರೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮೊದಲಿಗೆ ಹೌದು ಎಂದು ಉತ್ತರಿಸಿ ಆನಂತರ ತನಗೆ ಆಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

2. ನನ್ನ ವಿರುದ್ಧ 1 ಮತ್ತು 2 ನೇ ಆರೋಪಿತರು ನನ್ನ ಹಾಗೂ ಇತರ 8 ಜನರ ವಿರುದ್ಧ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ.166/2015 ನೇದ್ದನ್ನು ದಾಖಲಿಸಿದ್ದರು ಎಂದರೆ ಸರಿ. ಆ ಪ್ರಕರಣವನ್ನು ದಿ: 14-07-2015 ರಂದು ದಾಖಲಿಸಿದ್ದರು ಎಂದರೆ ಸರಿ. ಆ ಪ್ರಕರಣದ ಕುರಿತು ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ನಂತರ ಆರೋಪಿತರಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ನಾನು ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

3. ಈ ಪ್ರಕರಣದ ಫಿರ್ಯಾದಿಯನ್ನು ನ್ಯಾಯಾಲಯಕ್ಕೆ ದಿ: 29-09-2015 ರಂದು ದಾಖಲಿಸಿದ್ದೇನೆ ಎಂದರೆ ಸರಿ. ಆ ಅಸಲು ದಾವಾ ಪ್ರಕರಣದಲ್ಲಿ ಆರೋಪಿತರು ಮತ್ತು ನಾವುಗಳು ದಾಖಲೆಗಳನ್ನು ಹಾಜರುಪಡಿಸಿದ್ದೇವೆ ಮತ್ತು ಆ ಪ್ರಕರಣವು ವಿಚಾರಣೆಯಾಗಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಕಾರಣದಿಂದ ಆ ಪ್ರಕರಣವನ್ನು ವಾಪಾಸ್ಸು ನೀಡಿರುತ್ತಾರೆ ಎಂದರೆ ಸರಿ.

4. ಆ ಅಸಲು ದಾವೆಯಲ್ಲಿ ಆರೋಪಿತರು ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ದಾಖಲೆಗಳ ಹಾಜರಾತಿಯ ನಂತರ ನಮ್ಮ ವಕೀಲರು ಆರೋಪಿತರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿದ್ದರು ಎಂದರೆ ಸರಿ. ಆ ಪ್ರಕರಣದಲ್ಲಿ ನಿಪಿ-1 ರಂತೆ 1 ಮತ್ತು 2 ನೇ ಆರೋಪಿತರು ತಮ್ಮ ವಿವಾಹ ನೋಂದಣಿ ಪತ್ರವನ್ನು ಹಾಜರುಪಡಿಸಿದ್ದರು ಎಂದರೆ ಸಾಕ್ಷಿಯು ಅದು ಸುಳ್ಳು ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ.

5. ಸದರಿ ನಿಪಿ-1 ರ ಪ್ರಕಾರ 1 ಮತ್ತು 2 ನೇ ಆರೋಪಿತರ ವಿವಾಹವು ದಿ:25-05-2015 ರಂದು ಜರುಗಿದ ಬಗ್ಗೆ ನೋಂದಣಿ ಪ್ರಮಾಣ ಪತ್ರವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-3 ರಂತೆ ವಿವಾಹದ ಕುರಿತಾದ ಪೋಟೋಗಳನ್ನು ಸಹ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ನಾನು ಆ ಪೋಟೋಗಳನ್ನು ನೋಡಿರುವುದಿಲ್ಲ.

6. ನನಗೆ ನನ್ನ ಜನ್ಮ ದಿನಾಂಕದ ಬಗ್ಗೆ ಮಾಹಿತಿ ಇಲ್ಲ. ಆ ಪ್ರಕರಣದಲ್ಲಿ ನಾನು ನನ್ನ ಪರವಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳಲ್ಲಿ ನನ್ನ ಆಧಾರ್ ಕಾರ್ಡ್ ಸಹ ಇರುತ್ತದೆ ಎಂದರೆ ಸರಿ. ಆ ಆಧಾರ್ ಕಾರ್ಡನ್ನು ತಯಾರಿಸುವಾಗ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿ. ಅದರಲ್ಲಿ ನಮೂದಾದ ಪ್ರಕಾರ ನನ್ನ ಜನ್ಮ ದಿನಾಂಕವು ದಿ: 01-01-1991 ಅಂತ ಇರುತ್ತದೆ ಎಂದರೆ ಸರಿ. ಆ ಜನ್ಮ ದಿನಾಂಕವನ್ನು ನಾನು ನನ್ನ ಶಾಲಾ ದಾಖಲೆಯನ್ನು ಆದರಿಸಿ ಕೊಟ್ಟಿದ್ದೆನು.

7. ಆ ಅಸಲು ದಾವೆಯಲ್ಲಿ ಹಾಗೂ ಈ ಪ್ರಕರಣದ ದೂರಿನಲ್ಲಿ ನನ್ನ ಮತ್ತು 1 ನೇ ಆರೋಪಿತನ ವಿವಾಹವು ದಿ: 08-06-2015 ರಂದು ಹೊನ್ನಾಳಿಯ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಜರುಗಿದ ಬಗ್ಗೆ ನಮೂದಿಸಿದ್ದೇನೆ ಎಂದರೆ ಸರಿ. ಆ ಅಸಲು ದಾವೆಯಲ್ಲಿ ಆಗಿದ್ದ ನನ್ನ ಸಾಕ್ಷಿ ವಿಚಾರಣೆಯಲ್ಲಿ ನನ್ನ ವಿವಾಹದ ಸಂದರ್ಭದಲ್ಲಿ ಪೊಲೀಸರು ಸಹ ಹಾಜರಿದ್ದರು ಎಂದು ಮತ್ತು ಅವರ ಹೆಸರುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ಈಗಲೂ ಸಹ ನನಗೆ ಆ ಪೊಲೀಸರ ಹೆಸರನ್ನು ಹೇಳಲು ಆಗುವುದಿಲ್ಲ.

8. ಸಾಕ್ಷಿಗೆ ಈಗ ಈ ಪ್ರಕರಣದಲ್ಲಿ ಫಿರ್ಯಾದುದಾರರ ಪರವಾಗಿ ಹಾಜರುಪಡಿಸಿದ ನಿಪಿ-3 ರಿಂದ 7 ನೇದವುಗಳನ್ನು ತೋರಿಸಿ ಅವುಗಳಲ್ಲಿ ಎಲ್ಲಿಯೂ ಸಹ ಆ ರೀತಿಯ ಪೊಲೀಸರು ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ದಿನ ಪೊಲೀಸರು ಹಾಜರಿರಲಿಲ್ಲ, ನಾನೇ ಪೊಲೀಸರೆಂದು ಕೆಲವು ವ್ಯಕ್ತಿಗಳನ್ನು ತಪ್ಪುಭಾವಿಸಿದ್ದೆನು ಎಂದು ನುಡಿಯುತ್ತಾರೆ. ಆ ರೀತಿ ಪೊಲೀಸರೆಂದು ತಪ್ಪು ತಿಳಿದ ವ್ಯಕ್ತಿಗಳು ಆರೋಪಿತರ ಕಡೆಯವರಾಗಿದ್ದರಿಂದ ನಾವು ಅವರನ್ನು ಪೋಟೋಗೆ ಕರೆದಿರಲಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.